1598(2034) ಶ್ರೀ ಕೃಷ್ಣಪ್ಪ. ಎಂ.ಟಿ. (ತುರುವೇಕೆರೆ) ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಟೌನ್ ಮುನಿಸಿಪಾಲಿಟಿ ಮತ್ತು ಪಟ್ಟಣ ಪಂಚಾಯತಿ ಪ್ರದೇಶಗಳ ಅಭಿವೃದ್ಧಿಗಾಗಿ ಕೈಗೊಂಡಿರುವ ವಿಶೇಷ ಕ್ರಮಗಳೇನು ;

2. ಈ ಉದ್ದೇಶಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ, ವೆಚ್ಚ ಮಾಡಿದ ಹಣವೆಷ್ಟು ;

3. ಈ ಎಲ್ಲಾ ಪ್ರದೇಶಗಳನ್ನು ಒಳಚರಂಡಿ ವ್ಯವಸ್ಥೆಗೆ ಒಳಪಡಿಸಲು ಬೇಕಾಗುವ ಹಣವೆಷ್ಟು ಹಾಗೂ ಯಾವಾಗ ಈ ಕಾರ್ಯವನ್ನು ಮಾಡಲಾಗುವುದು ?

ಶ್ರೀ. ಎಸ್. ಆರ್.ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.):

1. 11 ನೇ ಹಣಕಾಸು ಯೋಜನೆಯಡಿಯಲ್ಲಿ ಪ್ರತಿವರ್ಷ ಪ್ರತಿ ಟೌನ್ ಮುನಿಸಿಪಾಲಿಟಿಗೆ ರೂ. 18.00 ಲಕ್ಷ ಮತ್ತು ಪಟ್ಟಣ ಪಂಚಾಯತಿಗೆ ರೂ.11.03 ಲಕ್ಷ ವಿಶೇಷ ಯೋಜನೆಗಳಿಗಾಗಿ 5 ವರ್ಷಗಳ ಕಾಲ ಒದಗಿಸಲಾಗುತ್ತಿದೆ.

ವಿಶೇಷ ಯೋಜನೆಗಳು ಈ ಕೆಳಕಂಡಂತಿವೆ.

1. ರಸ್ತೆ ರಿಪೇರಿ
2. ನೀರಿನ ಸೌಕರ್ಯ ಕಲ್ಪಿಸುವುದು
3. ಆರೋಗ್ಯ ಸುಧಾರಣೆ, ಇತ್ಯಾದಿ.

2. ಪ್ರತಿ ಟೌನ್ ಮುನಿಸಿಪಾಲಿಟಿಗೆ ರೂ. 54.00 ಲಕ್ಷ ಪ್ರತಿ ಪಟ್ಟಣ ಪಂಚಾಯತಿಗೆ ರೂ. 33.09 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

3. ಪ್ರತಿ ನಗರ ಸ್ಥಳೀಯ ಸಂಸ್ಥೆಗೆ ಅಂದಾಜು ರೂ. 2.50 ರಿಂದ 3.00 ಕೋಟಿಗಳು ಬೇಕಾಗುತ್ತದೆ.

ಸಮರ್ಪಕ ನೀರು ಸರಬರಾಜು ವ್ಯವಸ್ಥೆ ಇರುವ ಕಡೆ ಮಾತ್ರ ಈ ಯೋಜನೆ ಯಶಸ್ವಿಯಾಗುತ್ತದೆ. ಒಳಚರಂಡಿ ವ್ಯವಸ್ಥೆಯನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಂತ ಹಂತವಾಗಿ ಹಮ್ಮಿಕೊಳ್ಳಲಾಗುವುದು.

1599(2007) ಶ್ರೀ. ಕ್ಯಾತ್‌ಸಂದ್ರ ಎನ್.ರಾಜಣ್ಣ (ಬೆಳ್ಳಾವಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವೆರೇ?

ಅ. ಕಾವೇರಿ ನೀರಾವರಿ ನಿಗಮದ ವತಿಯಿಂದ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ತೆಗೆದು ಕೊಂಡಿರುವ ಕಾಮಗಾರಿಗಳ ಬಾಕಿ ಬಿಲ್ಲುಗಳ ಮೊತ್ತವೆಷ್ಟು: (ಕಳೆದ ಮೂರು ವರ್ಷವಾರು ವಿವರ ನೀಡುವುದು) ;

ಆ. ತುಮಕೂರು ಜಿಲ್ಲೆಯಲ್ಲಿ ಕಾವೇರಿ ನೀರಾವರಿ ನಿಗಮದ ವತಿಯಿಂದ ತೆಗೆದು ಕೊಂಡಿರುವ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಸ್ಥಗಿತಗೊಂಡಿರುವ ಕಾಮಗಾರಿಗಳನ್ನು ಮುಗಿಸಲು ಸರ್ಕಾರಕ್ಕೆ ಬೇಕಿರುವ ಕಾಲಾವಕಾಶವೆಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ಕಾವೇರಿ ನೀರಾವರಿ ನಿಗಮದಡಿ ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳ ವರ್ಷವಾರು (ಕಳೆದ ಮೂರು ವರ್ಷಗಳ) ಬಾಕಿ ಬಿಲ್ಲುಗಳ